Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ.ಸಿ ನಂಬರ 382/2024

ಸಿ ಡಬ್ಲ್ಯೂ-8
ಪಿ ಡಬ್ಲ್ಯೂ-6

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ನಾಗರೆಡ್ಡಿ |
| ತಂದೆಯ ಹೆಸರು | ಃ- | ನಾರಾಯಣಪ್ಪ |
| ವಯಸ್ಸು | ಃ- | 52 ವರ್ಷ |
| ಉದ್ಯೋಗ | ಃ- | ಒಕ್ಕಲುತನ |
| ವಾಸಸ್ಥಳ | ಃ- | ಈಚನಾಳ ತಾಂಡ |

ದಿ.10-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.***

ಚಾ.ಸಾ-7 ರವರ ಪರಿಚಯ ಇದೆ. ಆರೋಪಿಯನ್ನು ನೋಡಿಲ್ಲ. ಸುಮಾರು ಎರಡು ವರ್ಷದ ಹಿಂದೆ ಲಿಂಗಸುಗೂರು ಪೋಲಿಸ್ ಠಾಣೆಯ ಮುಂದೆ 3 ದಾಖಲೆಗಳಿಗೆ ಪೋಲಿಸರು ನನ್ನ ಸಹಿ ಪಡೆದಿರುತ್ತಾರೆ. ಯಾವ ಕಾರಣಕ್ಕೆ ನನ್ನ ಸಹಿ ಪಡೆದಿರುತ್ತಾರೆ ನನಗೆ ಗೊತ್ತಿಲ್ಲ. ನಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ನಮ್ಮ ಸಮಕ್ಷಮ ಆರೋಪಿಯ ತಪ್ಪೊಪ್ಪಿಗೆ ಮೂಲಕ ತೋರಿಸಿದ ಮೇರೆಗೆ ಯಾವುದೇ ಆಭರಣಗಳನ್ನು ಜಪ್ತಿಪಡಿಸಿಕೊಂಡಿಲ್ಲ. ಜಪ್ತಿ ಪಂಚನಾಮೆಯಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ.ಪಿ-13 ರಿಂದ 15 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-13(ಬಿ) ರಿಂದ ನಿ.ಪಿ-15(ಬಿ) ಎಂದು ಗುರುತಿಸಲಾಯಿತು. ಪೋಟೋಗಳನ್ನು ಈಗಾಗಲೇ ನಿ.ಪಿ-16 ರಿಂದ 19 ಎಂದು ಗುರುತಿಸಲಾಗಿದೆ. ನಿ.ಪಿ-13 ರಿಂದ 15 ರಲ್ಲಿ ಏನು ಬರೆದಿರುತ್ತಾರೆ ನನಗೆ ಗೊತ್ತಿಲ್ಲ. ಆರೋಪಿಯನ್ನು ವಿ.ಸಿ.ಯಲ್ಲಿ ನೋಡಿ ಗುರುತಿಸಿರುವುದಿಲ್ಲ.

**(ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೇಳಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಎಪಿಪಿ ಅವರಿಂದ:-**

ದಿನಾಂಕ 12-04-2024 ರಂದು ಬೆಳಿಗ್ಗೆ 10-15 ರಿಂದ 11-15 ಕ್ಕೆ ಪೋಲಿಸರು ನನ್ನನ್ನು ಮತ್ತು ಚಾ.ಸಾ-7 ರವರನ್ನು ಕರೆಯಿಸಿ ನಮಗೆ ಆರೋಪಿ ಸಿಕಂದರ ಮೇಲಿನಮನಿಯನ್ನು ತೋರಿಸಿ ಆತನು ಹಾಜರು ಪಡಿಸಿದ ಮೇರೆಗೆ ಆಭರಣಗಳನ್ನು ಜಪ್ತಿ ಪಂಚನಾಮೆಗೆ ಪಂಚರಾಗಲು ಸಹಕರಿಸಲು ಕೋರಿದ್ದು ನಾವು ಒಪ್ಪಿರುತ್ತೇವೆ ಎಂದರೆ ಸರಿಯಲ್ಲ. ನಂತರ

ಆರೋಪಿ, ನಾವು, ಅಕ್ಕಸಾಲಿಗ ಮತ್ತು ಪೋಲಿಸ್ ಸಿಬ್ಬಂದಿಯವರೊಂದಿಗೆ ಲಿಂಗಸುಗೂರ ಪಟ್ಟಣದ ವಿಜಯ ಮಹಾಂತೇಶ್ವರ ಮಠದ ಹತ್ತಿರ ಮುಂದೆ ಇರುವ ಮನೆಯಲ್ಲಿ ಕಳ್ಳತನ ಮಾಡಿದ ಬಂಗಾರದ ಆಭರಣಗಳನ್ನು ಇಟ್ಟ ಮುದಗಲ್ ಪಟ್ಟಣದ ಹಳೆಪೇಟೆ ಮುಖಾಂತರ ಮಟ್ಟೂರು ರಸ್ತೆ ಕಡೆಗೆ ಹೋಗಿ ನಂತರ ಪೈಗಂಬರ್ ನಗರದ ಕಡೆ ಹೊರಟಿದ್ದು ಅಲ್ಲಿ ಮನೆಯನ್ನು ತೋರಿಸಿ ಇದು ನನ್ನ ಹೆಂಡತಿ ಮತ್ತು ಮಕ್ಕಳು ವಾಸ ಇರುವ ಮನೆ ಎಂದು ತೋರಿಸಿ ಮನೆಯ ಹಾಲಿನ ಮದ್ಯದಲ್ಲಿ ಕಟ್ಟಿದ ಅಡ್ಡ ಗೋಡೆಯ ಮೇಲ್ಭಾಗದಲ್ಲಿ ಇಟ್ಟಿದ್ದ ಡಬ್ಬಿಯಿಂದ ಬಂಗಾರದ ಆಭರಣಗಳನ್ನು ತೆಗೆದು ಹಾಜರು ಪಡಿಸಿದ್ದು ಅವುಗಳನ್ನು ನಮ್ಮ ಮತ್ತು ಚಾ.ಸಾ-9 ರವರ ಸಮಕ್ಷಮ ಹಾಜರು ಪಡಿಸಿದ್ದು ಚಾ.ಸಾ-9 ರವರು ಡಿಜಿಟಲ್ ತೂಕದ ಯಂತ್ರದಿಂದ ತೂಕ ಮಾಡಿದಾಗ 1) ಒಂದು ಬಂಗಾರದ ಲಾಂಗ್ ಚೈನ್ 33 ಗ್ರಾಂ, 2) ಒಂದು ಬಂಗಾರದ ಚೈನ್ 10 ಗ್ರಾಂ, 3) ಒಂದು ಬಂಗಾರದ ನೆಕಲೇಸ್ 19 ಗ್ರಾಂ, 4) ಒಂದು ಜೊತೆ ಬಂಗಾರದ ಲಕ್ಷ್ಮೀ ಬೆಂಡೋಲೆ 05 ಗ್ರಾಂ ಕಂಡು ಬಂದಿರುತ್ತವೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಬೆಳಿಗ್ಗೆ 10-15 ರಿಂದ 11-15 ವರೆಗೆ ಜರುಗಿಸಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

2. ಅದೇ ದಿನ ಆರೋಪಿ ತೋರಿಸಿದ ಮೇರೆಗೆ ಚಾ.ಸಾ-1 ರವರ ಮನೆಯ ಹತ್ತಿರ ಸ್ಥಳ ಪಂಚನಾಮೆಯನ್ನು ಮದ್ಯಾಹ್ನ 12-25 ರಿಂದ 1-00 ವರೆಗೆ ನನ್ನ ಮತ್ತು ಚಾ.ಸಾ-7 ರವರ ಸಮಕ್ಷಮ ಮಾಡಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಆರೋಪಿ ಕಳ್ಳತನಕ್ಕೆ ಉಪಯೋಗಿಸಿದ ಕಬ್ಬಿಣದ ರಾಡನ್ನು ಬಿಸಾಕಿದ ಜಾಗವನ್ನು ತೋರಿಸಿದ ಮೇರೆಗೆ ಪಂಚನಾಮೆಯನ್ನು ಮದ್ಯಾಹ್ನ 1-15 ರಿಂದ 1-45 ವರೆಗೆ ನನ್ನ ಮತ್ತು ಚಾ.ಸಾ-7 ರವರ ಸಮಕ್ಷಮ ಮಾಡಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ನಿ.ಪಿ-16 ರಿಂದ 19 ವರೆಗೆ ಪೋಟೋ ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ-13 ರಿಂದ 19 ರಲ್ಲಿ ಇರುವ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀ ಎಸ್.ಎ.ವಿ ವಕೀಲರಿಂದ : -</u>**

ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.
ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.